(ಇಂದು ದಿನಾಂಕಃ **24-01-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲು ಶ್ರೀ ವಿ ಟಿ ಕೆ ವಕೀಲರಿಂದಃ**

ನನ್ನ ತಂದೆ ಸರ್ವೆ ನಂಃ 3/1 ಪಾಲು ವಿಭಾಗ ಮಾಡಲು ವರದಿಯನ್ನು ಕೊಟ್ಟಿದ್ದರು ಎಂದರೆ ಸುಳ್ಳು. ಅವರೊಂದಿಗೆ ನಾನು, ನನ್ನ ತಂದೆ ಮತ್ತು ಪ್ರತಿವಾದಿ 1 ನೇಯವರು ಪಾಲು ವಿಭಾಗದ ಬಗ್ಗೆ ವರದಿ ಕೊಟ್ಟಿದ್ದೇವು ಎಂದರೆ ಸುಳ್ಳು. ಅದಕ್ಕೆ ಚಲನ್ ಅನ್ನು ನನ್ನ ತಂದೆಯವರೇ ತುಂಬಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಹೇಗೆ ಸಹಿ ಮಾಡುತ್ತಾರೆ ಎಂದು ತೋರಿಸಲು ನಾನೇನು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ಪಾಲು ವಾಟ್ನಿಯಾದ ಬಗ್ಗೆ ನನ್ನ ತಂದೆ , ನಾನು ಮತ್ತು ಪ್ರತಿವಾದಿ 1 ನೇಯವರು ಖಾತೆ ಮಾಡಿಸಲು ಸಹಿ ಮಾಡಿದ್ದೇವು ಎಂದರೆ ಸುಳ್ಳು. ನಾನು ಸಹಿ ಹಾಕಿದ್ದರು ಹಾಕಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರಕ್ಕೆ ಸಹಿ ಮಾಡಿರುತ್ತೇವೆ . ಮತ್ತಾವುದೇ ನಾನು ಸಹಿ ಇರುವ ದಾಖಲೆಗಳನ್ನು ಹಾಜರು ಮಾಡಿಲ್ಲ . ನನ್ನ ವಾದ ಪತ್ರದಲ್ಲಿರುವ ಸಹಿಗಳು ಮತ್ತು ವಾಟ್ನಿ ಪತ್ರದಲ್ಲಿರುವ ಮತ್ತು ವರದಿಯಲ್ಲಿರುವ ಸಹಿ ಒಂದೇ ಎಂದರೆ ಸರಿಯಲ್ಲ. ಅವುಗಳನ್ನು ಪುರಾವೆಗಾಗಿ ಎಫ್ ಎಸ್ ಎಲ್ ಗೆ ಕಳುಹಿಸಲು ನನಗೆ ತೊಂದರೆ ಇಲ್ಲ. ಸದರಿ ವಾಟ್ನಿ ಪತ್ರದ ಆಧಾರದ ಮೇಲೆ ಮ್ಯುಟೇಶನ ಆಗಿತ್ತು ಎಂದರೆ ಸುಳ್ಳು. ಆ ಪ್ರಕಾರ ಉತಾರುಗಳು ಪ್ರತ್ಯೇಕವಾಗಿ ದಾಖಲಾಗಿವೆ ಎಂದರೆ ಸರಿ ಆದರೆ ನಾನು ಯಾವುದಕ್ಕೂ ಸಹಿ ಮಾಡಿಲ್ಲ ಎನ್ನುತ್ತಾರೆ . ನಾನು ಸದರಿ ಮ್ಯುಟೇಶನ ಅನ್ನು ಪ್ರಶ್ನಿಸಿ ಎಲ್ಲೂ ಪ್ರಶ್ನಿಸಿಲ್ಲ. ನಾನು ಸದರಿ ಉತಾರುಗಳ ಆಧಾರದ ಮೇಲೆ ಬ್ಯಾಂಕಿನಿಂದ ಸಾಲ ಪಡೆದಿದ್ದೇನೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿ ಪಿ 7 ರಿಂದ 9 ರ ಹಾತ್ ನಕಾಶೆ ಪ್ರಕಾರ ಸರ್ಕಾರಿ ದಾಖಲೆಗಳು ಅಲ್ಲ ಎಂದರೆ ಸರಿ. ಹಿಂದೆಯಾಗಿದ್ದ ವಾಟ್ನಿಯನ್ನು ರದ್ದು ಮಾಡಿ ಹೊಸ ವಾಟ್ನಿ ಮಾಡಿ ಎಂದು ಬರೆದಿದ್ದೇನೆ ಎಂದರೆ ಸರಿ ಸಾಕ್ಷಿದಾರ ವಾದ ಪತ್ರ ನೋಡಿ ಬರೆದಿಲ್ಲ ಎನ್ನುತ್ತಾರೆ. ಹಿಂದಿನ ವಾಟ್ನಿಯನ್ನು ರದ್ದು ಮಾಡಿ ಎಂದು ನಾನು ಮಾಗಣಿ ಮಾಡಿಲ್ಲ ಎಂದರೆ ಸರಿ . ನನ್ನ ತಂದೆ ಜೀವಂತ ಇದ್ದಾಗ ವಾಟ್ನಿ ಪತ್ರ ಮಾಡಿಕೊಳ್ಳಲಾಗಿದೆ ಮತ್ತು ಅವರು ತೀರಿ ಹೋದ ನಂತರ ಅವರ ಪಾಲನ್ನು ಸಹ ವಾಟ್ನಿ ಮಾಡಿಕೊಳ್ಳಲಾಗಿದೆ ಎಂದರೆ ಸುಳ್ಳು. ಸುಶೀಲಾ, ಶಾಂತಾ, ಮಹಾದೇವಿ, ಲೀಲಾ ಮತ್ತು ಸುಮಿತ್ರಾ ನನ್ನ ಸಹೋದರಿಯಾರಾಗಬೇಕು ಮತ್ತು ಗೌರವ್ವ ಉರ್ಫ ಪತ್ರಮ್ಮ ನನ್ನ ತಾಯಿಯಾಗಬೇಕು. ನನ್ನ ತಂದೆಗೆ ಪಾಲಿಗೆ ಬಂದಿದ್ದ ಸರ್ವೆ ನಂಃ 3/1 ಬಿ ಜಮೀನಿನ ಉತಾರಿನಲ್ಲಿ ನಾವು ಮತ್ತು ಸಹೋದರಿ ಮತ್ತು ನನ್ನ ತಾಯಿಯ ಹೆಸರು ದಾಖಲಾಯಿತು ಎಂದರೆ ಗೊತ್ತಿಲ್ಲ. ನಂತರ ನನ್ನ ಸಹೋದರಿಯವರು ನನ್ನ ತಾಯಿ ತಮ್ಮ ಹೆಸರುಗಳನ್ನು ಕಡಿಮೆ ಮಾಡಿ ನನ್ನ ಮತ್ತು ಪ್ರತಿವಾದಿ 1 ನೇಯ ಹೆಸರನ್ನು ಮಾತ್ರ ನಮೂದಿಸಿ

ಎಂದು ಅರ್ಜಿ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆ ಪ್ರಕಾರ ನನ್ನ ಮತ್ತು ಪ್ರತಿವಾದಿ 1 ನೇಯವರ ಹೆಸರು ಉತಾರಿನಲ್ಲಿ ದಾಖಲಾಯಿತು ಎಂದರೆ ಗೊತ್ತಿಲ್ಲ. ನಂತರ ನಾನು ದಕ್ಷಿಣದ ಕಡೆಗೆ ಮತ್ತು ಪ್ರತಿವಾದಿ 1 ಉತ್ತರ ಕಡೆಗೆ ಸದರಿ ಸ್ವತ್ತನ್ನು ಭಾಗ ಮಾಡಿಕೊಂಡೇವು ಎಂದರೆ ಸರಿಯಲ್ಲ.

2. ನಿ ಪಿ 2 ರ ಪ್ರಕಾರ ನನ್ನ ಮತ್ತು ಪ್ರತಿವಾದಿ 1 ನೆಯವರ ಹೆಸರು ಸರ್ವೆ ನಂಃ 3/1/ಬಿ ಉತಾರಿನಲ್ಲಿ ದಾಖಲಾಗಿದೆ ಎಂದರೆ ಸರಿ. ನನ್ನ ಸಹೋದರಿಯವರು ಮತ್ತು ನನ್ನ ತಾಯಿ ಅದಕ್ಕೆ ಕಬೂಲು ವರದಿ ನೀಡಿರುತ್ತಾರೆ ಎಂದರೆ ಸರಿ. ನಾನು ದಕ್ಷಿಣದ ಕಡೆಗೆ ಮತ್ತು ಪ್ರತಿವಾದಿ 1 ಉತ್ತರ ಕಡೆಗೆ ಸದರಿ ಸ್ವತ್ತನ್ನು ಭಾಗ ಮಾಡಿಕೊಂಡು ಅನುಭವಿಸುತ್ತಿದ್ದೇವೆ ಎಂದರೆ ಸುಳ್ಳು. ಈಗಾಗಲೇ ನಾನು ಪ್ರತಿವಾದಿ 1, ನಾನು ಮತ್ತು ನನ್ನ ತಂದೆ ವಿಭಾಗ ಮಾಡಿಕೊಂಡಿರುವುದರಿಂದ ನಾನು ಯಾವುದೇ ಪಾಲು ಕೇಳಲು ಬರುವುದಿಲ್ಲ ಮತ್ತು ಒಟ್ಟು ಕುಟುಂಬ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**